# ಮಹಿಳಾ ಸಣ್ಣಕತೆಗಳಲ್ಲಿ ಉದ್ಯೋಗಸ್ಥ ಹೆಣ್ಣಿನ ಅಭಿವ್ಯಕ್ತಿಯ ಸ್ವರೂಪ: ಒಂದು ಅಧ್ಯಯನ

**ಸವಿತಾ ಬಿ.**

ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ ಸರ್ಕಾರಿ ಕಾಲೇಜು, ಕಾಸರಗೋಡು.

DOI: https://doi.org/10.5281/zenodo.17773630

## ABSTRACT:

ಇಂದು ಹೆಣ್ಣಿನ ಉತ್ಪಾದನಾ ದುಡಿಮೆ, ಆರ್ಥಿಕತೆ ಮತ್ತು ಆರ್ಥಿಕ ಸ್ವಾವಲಂಬನೆಯ ಬಗೆಗೆ ಆಧುನಿಕ ಲೇಖಕಿಯರು ತಮ್ಮ ಕಥನಗಳಲ್ಲಿ ಅನಿಸಿಕೆಗಳನ್ನು ವ್ಯಕ್ತಪಡಿಸುತ್ತಿದ್ದಾರೆ. ಪ್ರಸ್ತುತ ಜಾಗತೀಕರಣದ ಸಮಾಜದಲ್ಲಿ ಪ್ರತಿಯೊಂದು ವಸ್ತು, ವಿಷಯಗಳು ವಿನಿಮಯ ಮೌಲ್ಯವನ್ನು ಪಡೆಯುತ್ತಿರುವಾಗ ಹೆಣ್ಣಿನ ದುಡಿಮೆ ಎನ್ನುವಂತದ್ದು ಅಗತ್ಯವೂ ಅನಿವಾರ್ಯವೂ ಆಗಿದೆ ಎನ್ನುವಲ್ಲಿಗೆ ತಲಪಿದೆ. ವ್ಯವಸ್ಥೆಯಲ್ಲಿ ಬಲವಾಗಿ ಬೇರೂರಿದ್ದ 'ಉದ್ಯೋಗಂ ಪುರುಷ ಲಕ್ಷಣಂ' ಎನ್ನುವ ಮೌಲ್ಯ ಬದಲಾವಣೆಯನ್ನು ಕಾಣುತ್ತಿದೆ. ಆಧುನಿಕ ಮಾದರಿಯ ಹೆಣ್ಣು ಉದ್ಯೋಗದ ಮೂಲಕ ಇಂದು ಸಮಾಜದ ಜೊತೆಗೆ ಸಂಪರ್ಕವನ್ನು ಸಾಧಿಸಿದ್ದಾಳೆ. ವಿಸ್ತರಿಸಿಕೊಂಡ ಅನುಭವದ ಮೂಲಕ ಸಮಾಜವನ್ನು ಕುತೂಹಲದಿಂದ ನೋಡುತ್ತಿದ್ದಾಳೆ. ದುಡಿಮೆಯ ಭಾರದಿಂದ ನಲುಗಿಹೋಗುತ್ತಿರುವ ಅವಳನ್ನು ಸಮಾಜ ಮರುಕ ಮತ್ತು ಅನುಕಂಪದಿಂದ ನೋಡುತ್ತಿದೆ. ಆದರೂ ತನ್ನೊಳಗಿನ ಜೀವ ಚೈತನ್ಯವನ್ನು ಕಳೆದುಕೊಳ್ಳದೆ ಇಂದು ಮಹಿಳೆ ಹಲವು ಕ್ಷೇತ್ರಗಳಲ್ಲಿ ಬೆಳೆದು ನಿಂತು ಹೆಣ್ತನದ ಛಾಪನ್ನು ದಿಗಂತದೆತ್ತರಕ್ಕೆ ಏರಿಸಿಬಿಟ್ಟಿದ್ದಾಳೆ. ಅವಳು ಹೆಜ್ಜೆಯಿಡುವ ಹಾದಿ ಕಲ್ಲು, ಮುಳ್ಳುಗಳಿಂದ ಕೂಡಿದ್ದರೂ ಅದನ್ನೆಲ್ಲ ಮೆಟ್ಟಿನಿಂತು ತನ್ನ ಕೇಂದ್ರದಲ್ಲಿ ತಾನು ಕಾಣಿಸಿಕೊಳ್ಳುತ್ತಿದ್ದಾಳೆ. ಅವಳು ಮನೆಯೊಳಗಿನ ಸಾಂಸ್ಕೃತಿಕ ನೆಲೆಯಿಂದ ಹೊರಬಂದು ತನ್ನನ್ನು ಉತ್ಪಾದನಾ ಚಟುವಟಿಕೆಯಲ್ಲಿ ತೊಡಗಿಸಿಕೊಂಡವರೆಗಿನ ಔದ್ಯೋಗಿಕ ಮಜಲುಗಳನ್ನು ಮತ್ತು ಎದುರಿಸಿದ ಸಮಸ್ಯೆಗಳ ಸ್ವರೂಪವನ್ನು ಈ ಲೇಖನದಲ್ಲಿ ಚರ್ಚೆಗೊಳಪಡಿಸಲಾಗಿದೆ.

## KEYWORDS:

ಹೆಣ್ಣು, ದುಡಿಮೆ, ಸಾಂಸ್ಕೃತಿಕ ನೆಲೆ, ಉತ್ಪಾದನಾ ನೆಲೆ, ಉದ್ಯೋಗ, ಆರ್ಥಿಕತೆ, ಆರ್ಥಿಕ ಸ್ವಾವಲಂಬನೆ.

ಹೆಣ್ಣಿನ ಆರ್ಥಿಕತೆಗೆ ಸಂಬಂಧಿಸಿದಂತೆ ಸಿಮೊನ್ ದ ಬೋವಾಳ ಮಾತುಗಳು "ಪ್ರತಿ ನಾಗರಿಕ ಹೆಣ್ಣು ಮತದಾನಕ್ಕೆ ಅರ್ಹಳು. ಆದರೆ, ಆರ್ಥಿಕ ಸ್ವಾತಂತ್ರ್ಯವೂ ಜೊತೆಗೆ ಸಿಗುವವರೆಗೆ ನಾಗರಿಕ ಹಕ್ಕುಗಳು ಸಿದ್ಧಾಂತದಲ್ಲಿ ಮಾತ್ರ ಉಳಿಯುತ್ತವೆ. ತನಗೂ ಗಂಡಸಿಗೂ ನಡುವೆ ಇದ್ದ ಅಂತರವನ್ನು ಕಡಿಮೆ ಮಾಡಿಕೊಳ್ಳಲು ಆಕೆ ಉತ್ಪಾದನಾ ದುಡಿಮೆಯಲ್ಲಿ ತೊಡಗಿಸಿಕೊಳ್ಳುವ ಹಾದಿಯನ್ನು ತುಳಿದಿದ್ದಾಳೆ. ಆಕೆಗೆ ಸ್ವಾತಂತ್ರ್ಯ ಲಭಿಸಲು ಇದಲ್ಲದೆ ಬೇರೆ ದಾರಿಗಳಿಲ್ಲ. ಆಕೆ ಪರಾವಲಂಬಿಯಾಗುವುದು ನಿಂತುಹೋದಾಗ, ನೆರವನ್ನು ಆಧರಿಸಿ ಕಟ್ಟಿದ ವ್ಯವಸ್ಥೆ ಕುಸಿದು ಬೀಳುತ್ತದೆ. ಆಕೆಗೂ ಲೋಕಕ್ಕೂ ನಡುವೆ ಪುರುಷ ಮಧ್ಯವರ್ತಿಯಾಗುವ ಅಗತ್ಯ ಬೀಳುವುದಿಲ್ಲ"[1] ಇಲ್ಲಿ ಹೆಣ್ಣು ಆರ್ಥಿಕ ಅವಕಾಶಗಳನ್ನು ಪಡೆಯುವ ಮೂಲಕ ಸಮಾಜಕ್ಕೆ ತೆರೆದುಕೊಳ್ಳಬೇಕಾದ ಅಗತ್ಯವನ್ನು ಬೋವಾ ಮನಗಂಡಿದ್ದಾರೆ. ಆರ್ಥಿಕ ಸ್ವಾವಲಂಬನೆಯಿಂದಲೇ ಹೆಣ್ಣಿನ ಬಿಡುಗಡೆ ಸಾಧ್ಯವಾಗುವುದಿಲ್ಲ. ಬದಲಿಗೆ ಹೆಣ್ಣಿನ ಬಿಡುಗಡೆಯ ಇತರ ದಾರಿಗಳಂತೆ ಇದನ್ನೂ ಒಂದು ದಾರಿಯಾಗಿ ಬೋವಾ ಗುರುತಿಸಿದ್ದಾರೆ. ಹೆಣ್ಣಿನ ಆರ್ಥಿಕತೆಯ ವಿಕಾಸದ ಜೊತೆಗೆ ನೈತಿಕ, ಸಾಮಾಜಿಕ, ಸಾಂಸ್ಕೃತಿಕ ನೆಲೆಯ ಇತರ ಪರಿಣಾಮಗಳಿಗೂ ಈ ಆರ್ಥಿಕ ಸನ್ನಿವೇಶ ಕಾರಣವಾಗಬೇಕಿದೆ ಎನ್ನುವುದು ಸಿಮೊನ್ ದ ಬೋವಾ ಅವರ ಅಭಿಪ್ರಾಯ.

ಸಾಮಾಜಿಕ ವ್ಯವಸ್ಥೆಯು ಕಾಲಕಾಲಕ್ಕೆ ಬದಲಾಗುತ್ತಿರುತ್ತದೆ. ಬದಲಾದ ಪರಿಸರದಲ್ಲಿ ಸ್ತ್ರೀ ಪುರುಷ ಮಾದರಿಗಳು ಹಾಗೂ ಅದರ ನಿರೀಕ್ಷೆಗಳು ಕೂಡಾ ಬದಲಾಗುತ್ತವೆ. ಊಳಿಗಮಾನ್ಯ ಪದ್ಧತಿಯಿಂದ ಬಂಡವಾಳಶಾಹಿ ಪದ್ಧತಿಗೆ ಒಗ್ಗಿಕೊಂಡ ಸಾಮಾಜಿಕ ವ್ಯವಸ್ಥೆಯು ಮಹಿಳೆಯರಿಗೆ ಶಿಕ್ಷಣ, ಉದ್ಯೋಗಗಳ ಅವಕಾಶವನ್ನು ಕಲ್ಪಿಸಿತು. ಉದ್ಯೋಗವು ಮಹಿಳೆಗೆ ಆರ್ಥಿಕ ಸ್ವಾವಲಂಬನೆಯನ್ನು ತಂದುಕೊಟ್ಟಿತು. ಆದರೆ ಮನೆ ಮತ್ತು ಉದ್ಯೋಗ ಕ್ಷೇತ್ರ ಈ ಎರಡನ್ನು ನಿಭಾಯಿಸಬೇಕಾದ ಪರಿಸ್ಥಿತಿಯಲ್ಲಿ ಹೆಣ್ಣಿನ ಸಮಸ್ಯೆಗಳು ಹೊಸ ರೂಪವನ್ನು ಪಡೆದುಕೊಂಡವು.

ಶಿಕ್ಷಣ, ಆರ್ಥಿಕ ಸ್ವಾತಂತ್ರ್ಯ, ಉದ್ಯೋಗ ಕ್ಷೇತ್ರ ಇವು ಮೂರು ಪ್ರಸ್ತುತ ಸಂದರ್ಭದಲ್ಲಿ ಆಧುನಿಕ ಜೀವನವನ್ನು ಪ್ರಭಾವಿಸುತ್ತಿರುವ ಅಂಶಗಳು. ಜಾಗತೀಕರಣದ ಇಂದಿನ ಸಂದರ್ಭದಲ್ಲಿ ಅತ್ಯಗತ್ಯ ವಸ್ತುಗಳು ಕೂಡ ವಿನಿಮಯ ಮೌಲ್ಯವನ್ನು ಪಡೆಯುತ್ತಿರುವಾಗ ಮಧ್ಯಮ, ಕೆಳಜಾತಿಯ ಕುಟುಂಬಗಳಲ್ಲಿ ಹೆಣ್ಣಿನ ದುಡಿಮೆ ಕನಿಷ್ಠ ರೂಪದಲ್ಲಿ ಹೆಣ್ಣಿಗೆ ಅವು ಅನಿವಾರ್ಯವೂ ಅಗತ್ಯವೂ ಆಗಿ ಪರಿಣಮಿಸಿದೆ. ಔದ್ಯೋಗಿಕ ರಂಗಕ್ಕೆ ಕಾಲಿರಿಸಿದ ಹೆಣ್ಣಿನಲ್ಲಿ ಅನೇಕ ಪಲ್ಲಟಗಳು ಸಂಭವಿಸಿವೆ. ಆಧುನಿಕ ಮಹಿಳೆಯನ್ನು ಉದ್ಯೋಗ ಮತ್ತು ಕುಟುಂಬದ ಹಿನ್ನೆಲೆಯಲ್ಲಿ ನಿರ್ವಚಿಸಿಕೊಳ್ಳಬೇಕಾಗುತ್ತದೆ. ಆಕೆಯಲ್ಲಿ ಆತ್ಮವಿಶ್ವಾಸ ಹೆಚ್ಚಿದೆ. ಅವಲಂಬಿತ ಜೀವಿಯಾಗಿದ್ದವಳು ಸ್ವಾವಲಂಬಿಯಾಗಿದ್ದಾಳೆ. ಆಕೆಯನ್ನು ಸುತ್ತುವರಿದಿರುವ

ಸಾಂಪ್ರದಾಯಿಕ ನಿಲುವುಗಳಿಂದ ಬಿಡುಗಡೆ ಪಡೆಯುತ್ತಿದ್ದಾಳೆ. ಹೊರ ಜಗತ್ತಿಗೆ ಕಾಲಿಟ್ಟ ಮಹಿಳೆ ತನಗೆದುರಾಗುವ ಅನೇಕ ಅಡೆತಡೆಗಳನ್ನು, ಸವಾಲುಗಳನ್ನು ಎದುರಿಸುತ್ತಾ ಸ್ವಸಾಮರ್ಥ್ಯದ ಅರಿವಿನೊಂದಿಗೆ ಮುಂದೆ ಹೆಜ್ಜೆ ಇಡುತ್ತಿದ್ದಾಳೆ. ಬದಲಾದ ಸಾಮಾಜಿಕ ಪರಿಸರದಲ್ಲಿ ಸ್ತ್ರೀಯ ಮಾದರಿಯಲ್ಲಿ ಉಂಟಾದ ಗಮನಾರ್ಹ ಬದಲಾವಣೆಯನ್ನು ದೃಷ್ಟಿಯಲ್ಲಿಟ್ಟುಕೊಂಡೇ 'ಕುಟುಂಬ' ಪರಿಕಲ್ಪನೆಯನ್ನು ನಿರ್ವಚಿಸಿಕೊಳ್ಳಬೇಕಾದ ಅಗತ್ಯವಿದೆ. ಆಧುನಿಕ 'ಕುಟುಂಬ' ಪರಿಕಲ್ಪನೆಯ ಒಳಗೆ ಉದ್ಯೋಗಸ್ಥ ಮಹಿಳೆಯ ಸೇರ್ಪಡೆಯಾಗಿದೆ. ಆಕೆ ಸಂಭ್ರಮ ಮತ್ತು ಕುತೂಹಲದಿಂದ ಸಮಾಜವನ್ನು ನೋಡುತ್ತಿರುವವಳಾದರೆ, ಮನೆಯ ಹಾಗೂ ಉದ್ಯೋಗದ ಜೀವನವನ್ನು ಒಟ್ಟಿಗೆ ನಿರ್ವಹಿಸುವ ಅವಳನ್ನು ಸಮಾಜ ಮರುಕ ಹಾಗೂ ಅನುಕಂಪದಿಂದ ನೋಡುತ್ತಿದೆ.

ಪ್ರಾರಂಭಿಕ ಹಂತಗಳಲ್ಲಿ ಮಹಿಳೆಗೆ ಲಭಿಸತೊಡಗಿದ ಶಿಕ್ಷಣವು ಆದರ್ಶ ಗೃಹಿಣಿಯನ್ನು ರೂಪಿಸುವ ನೆಲೆಯಲ್ಲಿ ಕೆಲಸ ಮಾಡಿದರೆ, ಉದ್ಯೋಗವು ಆಧುನಿಕ ಕುಟುಂಬದ ಕ್ಷೇಮಾಭಿವೃದ್ಧಿಯ ಹಿನ್ನೆಲೆಯಲ್ಲಿ ವ್ಯಾಖ್ಯಾನಗೊಂಡಿತು. ಆದರೆ ಕಾಲ ಬದಲಾದಂತೆ, ಜಾಗತೀಕರಣ ಹಂತದ ಸಮಾಜದಲ್ಲಿ ಸ್ತ್ರೀ ಪುರುಷರಿಬ್ಬರೂ ದುಡಿಯುವುದು ಅನಿವಾರ್ಯವೆನ್ನುವಂತೆ ಆಯಿತು. ಸ್ತ್ರೀವಾದದ ಆರಂಭ ಹಂತದ ಕಥೆಗಳಲ್ಲಿ ಮಹಿಳೆಯರ ಉದ್ಯೋಗದ ವಿಷಯ ಎಲ್ಲಿಯೂ ಕಂಡುಬರುವುದಿಲ್ಲ. ಕುಟುಂಬದ ಆರ್ಥಿಕ ಅಧಿಕಾರ ಪುರುಷನ ಕೈಯಲ್ಲಿದ್ದುದು ಕಂಡುಬರುತ್ತದೆ. ಮಹಿಳೆಗೆ ಸಂಬಂಧಪಟ್ಟಂತೆ ವಿವಾಹ ಮತ್ತು ಕುಟುಂಬ ವ್ಯವಸ್ಥೆಗೆ ಹೆಚ್ಚು ಒತ್ತು ಕೊಟ್ಟಿರುವುದು ಕಂಡುಬರುತ್ತದೆ. ವಿರಾಮದ ಸಮಯಗಳಲ್ಲಿ ಪುಸ್ತಕವನ್ನು ಓದುವ ಕ್ರಿಯೆಗೆ ಮಹತ್ವ ನೀಡಲಾಗಿದೆ. ಎಂದರೆ ಈ ಕಾಲದಲ್ಲಿ ಮಹಿಳೆಗೆ ಉದ್ಯೋಗದ ಅವಕಾಶ ತೆರೆದುಕೊಂಡಿರಲಿಲ್ಲ. ಸ್ತ್ರೀ ತನ್ನ ಪೋಷಕರನ್ನು ಕಳೆದುಕೊಂಡು ಅತಂತ್ರಳಾದಾಗ ಮತ್ತು ಕುಟುಂಬದ ಅಗತ್ಯಗಳನ್ನು ಸರಿದೂಗಿಸಲು ಬೇರೆ ನಿರ್ವಾಹವೇ ಇಲ್ಲ ಎನ್ನುವ ಸಂದರ್ಭದಲ್ಲಿ ಉದ್ಯೋಗಸ್ಥಳಾಗುವುದು ಉಚಿತವೆನ್ನುವ ಅಭಿಪ್ರಾಯವಿದ್ದಿರುವುದು ಕಂಡುಬರುತ್ತದೆ. ಇಂತಹ ಸಂದರ್ಭಗಳಲ್ಲಿ ಮಹಿಳೆ ಪ್ರಾಸಂಗಿಕವಾಗಿ ಆರ್ಥಿಕ ನೆಲೆಯಲ್ಲಿ ತೊಡಗಿಸಿಕೊಂಡಿರುವುದು ಕಂಡು ಬರುವುದಿದ್ದರೂ ಅವರ ಕ್ರಿಯೆಗಳು ಅವರ ಆಯ್ಕೆಗಳಾಗಿ ಕಂಡುಬರುವುದಿಲ್ಲ. ಇದಲ್ಲದೆ ಸಮಾಜದ ಕೆಲವು ಅಗತ್ಯಗಳಾದ ಹೆಣ್ಣುಮಕ್ಕಳ ಶಿಕ್ಷಣ, ವೈದ್ಯಕೀಯ, ರಾಷ್ಟ್ರೀಯತೆ ಇವುಗಳನ್ನು ಪೂರೈಸುವ ಸಂದರ್ಭದಲ್ಲಿ ಮಹಿಳೆ ಕುಟುಂಬದಿಂದ ಹೊರಬಂದು ಸಾರ್ವಜನಿಕ ಸೇವಾಕ್ಷೇತ್ರದಲ್ಲಿ ತೊಡಗುವುದನ್ನು ಮಾನ್ಯಮಾಡಿರುವುದು ಕಾಣಿಸುತ್ತದೆ. ತ್ರಿವೇಣಿಯವರ ಕಥೆಗಳಲ್ಲಿ ಹೆಣ್ಣು ಅನಿವಾರ್ಯ ಸಂದರ್ಭದ ಒತ್ತಡಗಳ ಕಾರಣದಿಂದ ಉದ್ಯೋಗ ಕೈಗೊಂಡಿರುವುದು ವ್ಯಕ್ತವಾಗುತ್ತದೆ. ಒಟ್ಟಿನಲ್ಲಿ ಇವೆಲ್ಲವೂ ಸ್ಥಾಪಿತ ವ್ಯವಸ್ಥೆಯ ಅಗತ್ಯಗಳೊಂದಿಗೆ, ಅವುಗಳ ನಿರ್ದೇಶನದೊಳಗೆ ನಿಯಂತ್ರಿತವಾಗಿದ್ದು, ಉಳಿದಂತೆ ಹೆಣ್ಣಿನ ಅಸ್ತಿತ್ವ, ಆರ್ಥಿಕ ಸ್ವಾವಲಂಬನೆ, ಸ್ವಾತಂತ್ರ್ಯ, ಸಮಾನ ಅವಕಾಶ ಇತ್ಯಾದಿ

ಸೈದ್ಧಾಂತಿಕತೆಗಳು ಗೈರುಹಾಜರಾಗಿದ್ದುವು.

ಮುಂದೆ ಕಾಲ ಕಳೆದಂತೆ ಉದ್ಯೋಗಸ್ಥರಾದ ಹೆಣ್ಣು ಮಕ್ಕಳು ಕಥೆಗಳಲ್ಲಿ ಸ್ಥಾನ ಪಡೆದಿರುವರಾದರೂ ಪಿತೃಪ್ರಧಾನ ವ್ಯವಸ್ಥೆಯಲ್ಲಿ ಬಹುತೇಕ ಮಹಿಳೆಯರು ಆಸ್ತಿ, ಹಣ, ದುಡಿಮೆಯ ಆದಾಯದ ಮೇಲೆ ಸಾಮಾನ್ಯವಾಗಿ ನಿಯಂತ್ರಣ ಹೊಂದದೆ ಇರುವುದು ಕಂಡುಬರುತ್ತದೆ. ಉದ್ಯೋಗವಿರಲಿ, ಇಲ್ಲದಿರಲಿ ಅವರ ಹಣಕಾಸಿನ ವ್ಯವಹಾರಗಳು ತುಂಬಾ ಸೀಮಿತವಾದದ್ದಾಗಿದೆ. ಉದ್ಯೋಗಸ್ಥೆಯರಾದ ಮಹಿಳೆಯರ ವೇತನಗಳು ತನ್ನ ವೈಯಕ್ತಿಕ ಉಪಯೋಗಕ್ಕಿಂತಲೂ ಕುಟುಂಬದ ಯೋಗಕ್ಷೇಮಕ್ಕಾಗಿ ಉಪಯೋಗವಾಗುತ್ತಿದ್ದುದೇ ಹೆಚ್ಚು. ವೈದೇಹಿಯವರ 'ಹಕ್ಕಿಲ್ಲದವರು' ಕಥೆಯ ಸಿರಿ ಗಂಡನನ್ನು ತ್ಯಜಿಸಿ ತವರುಮನೆಗೆ ಬಂದು ಮನೆ, ಆಸ್ತಿ, ಪಾಳುಬಿದ್ದ ತೋಟಗಳನ್ನು ಶ್ರಮ ಸಂಕಲ್ಪದಿಂದ ಫಸಲು ಬರುವಂತೆ ಮಾಡಿದರೂ ಅವುಗಳ ಮೇಲಿನ ಹಕ್ಕು ಆಕೆ ಹೆಣ್ಣಾದ ಕಾರಣದಿಂದ ಅವಳದ್ದಲ್ಲ. ಸಮಾಜದಲ್ಲಿ ರೂಢಿಯಲ್ಲಿದ್ದ 'ಕೊಟ್ಟ ಹೆಣ್ಣು ಕುಲದಿಂದ ಹೊರಗೆ' ಎನ್ನುವ ನಿಲುವಿನ ಪ್ರಕಾರ ಆಸ್ತಿಯ ಹಕ್ಕು ಇರುವುದು ಗಂಡುಮಗನ ಮೇಲೆ. ಗಂಗಾ ಪಾದೇಕಲ್ ಅವರ 'ಇದು ಬರಿ ಬೆಳಗಲ್ಲೋ ಅಣ್ಣಾ' ಕಥೆಯ ಗೌರ, 'ಬದುಕಿನ ಬೇರನ್ನರಸಿ' ಕಥೆಯ ಕುಸುಮ, ಮಿತ್ರಾ ವೆಂಕಟ್ರಾಜರ 'ನನ್ನಕ್ಕ ನಿಲೋಫಾರ್' ಕಥೆಯ ನಾಯಕಿ, ವೀಣಾ ಶಾಂತೇಶ್ವರರ 'ಅವಳ ಸ್ವಾತಂತ್ರ್ಯ' ಕಥೆಯ ವಿಮಲ ಇವರೆಲ್ಲಾ ದುಡಿದು ಮನೆಯ ಇಡೀ ಭಾರವನ್ನು ನಿಭಾಯಿಸುವ ಚಿತ್ರಣ ಕಥೆಗಳಲ್ಲಿ ಕಾಣಿಸುತ್ತವೆ. ಈ ಕಥೆಗಳಲ್ಲಿ ಬರುವ ನಾಯಕಿಯರಲ್ಲಿ ಯಾರಲ್ಲಿಯೂ ಆರ್ಥಿಕ ನಿಯಂತ್ರಣ ಅವರ ಕೈಯಲ್ಲಿಲ್ಲ. ಅನೇಕ ಸ್ತ್ರೀವಾದಿ, ಸಮಾಜವಾದಿ ಚಿಂತಕರು ಮಹಿಳೆ ಉತ್ಪಾದನಾ ವಲಯದಲ್ಲಿ ಹೆಚ್ಚು ಹೆಚ್ಚು ತೊಡಗಿಕೊಂಡಷ್ಟು ದಾಸ್ಯದಿಂದ ಮುಕ್ತಳಾಗಬಹುದು ಎಂದು ಅಭಿಪ್ರಾಯಪಟ್ಟಿದ್ದರೂ ಆರ್ಥಿಕ ಸ್ವಾವಲಂಬನೆಯೊಂದರಿಂದಲೇ ಬಿಡುಗಡೆಯು ಅಸಾಧ್ಯವೆನ್ನುವುದು ಕಥೆಗಳ ಪಾತ್ರಗಳ ಮೂಲಕ ವ್ಯಕ್ತವಾಗುತ್ತದೆ.

**ಹೆಣ್ಣಿಗೆ ಸಂಬಂಧಪಟ್ಟಂತೆ ಎರಡು ರೀತಿಯ ಆರ್ಥಿಕ ದುಡಿಮೆಯ ಕ್ಷೇತ್ರಗಳು:**

1. ಸಾರ್ವಜನಿಕ ಕ್ಷೇತ್ರ.
2. ಖಾಸಗಿ ಕ್ಷೇತ್ರ.

ಸರಕಾರಿ ದುಡಿಮೆ ಮತ್ತು ಸರಕಾರೇತರ ದುಡಿಮೆಗಳು ಸಾರ್ವಜನಿಕ ಕ್ಷೇತ್ರದಲ್ಲಿ ಒಳಗೊಂಡರೆ, ಮಹಿಳೆಯ ಮನೆಯ ಒಳಗಿನ ದುಡಿಮೆ ಖಾಸಗಿ ಕ್ಷೇತ್ರವಾಗಿ ಪರಿಗಣಿಸಲ್ಪಟ್ಟಿದೆ. ಆರಂಭ ಕಾಲದ ಲೇಖಕಿಯರ ಕಥೆಗಳಲ್ಲಿ ಮನೆಯ ಒಳಗೆ ದುಡಿಯುವ, ಕುಟುಂಬದ ಸುಖ, ನೆಮ್ಮದಿಗಾಗಿ ತನ್ನ ವೈಯಕ್ತಿಕ ಸುಖ, ಸಂತೋಷಗಳನ್ನು ತ್ಯಾಗ ಮಾಡುವ, ತಮ್ಮ ಅಸ್ತಿತ್ವವನ್ನೇ ಕಳಕೊಂಡ 'ಅಮ್ಮಂದಿರ'

ಚಿತ್ರಣಗಳು ದೊರೆಯುತ್ತವೆ. ಉದಾಹರಣೆಗೆ ಎಂ.ಎಸ್. ವೇದಾ ಅವರ 'ಪಲ್ಲಿ ಮತ್ತು ಚಿಟ್ಟೆ' ಕಥೆಯ ಭಾಗಕ್ಕ ಮನೆಯ ಒಳಗೆ ದುಡಿಯುವ ಎಲ್ಲಾ ಮಹಿಳೆಯರ ಪ್ರತಿನಿಧಿಯಂತಿದ್ದಾಳೆ. ಅವಳು ಹೇಗಿದ್ದಳು ಎಂದರೆ ಕಥೆಯಲ್ಲಿಯೇ

ವಿವರಿಸಿರುವಂತೆ, "ಮದುವೆಯ ಮೊದಲು ಹಟ್ಟಿಯ (ಮನೆ) ಕಾರ್ಯಭಾರವ ತನ್ನ ಹೆಗಲ ಮೇಲೆ ಏರಿಕೊಂಡು ಅಚ್ಚುಕಟ್ಟಾಗಿ ನಿರ್ವಹಿಸುತ್ತಾ ಹಾಗೆ ಮಾಡಿದ್ದಕ್ಕೆ ಮಾಡಿಸಿಕೊಂಡವರಿಂದ ಒಂದು ಒಳ್ಳೆಯ ನೋಟ, ಮಾತು, ನಗುವಾದರೂ ಎದುರು ನೋಡಬೇಕೆಂಬ ಅರಿವಿಲ್ಲದೆ ಕಾಲಕಳೆಯುತ್ತಿದ್ದ ಭಾಗಕ್ಕ ಎಲ್ಲರ ಪಾಲಿಗೂ 'ಪೆದ್ದೆಣ್ಣು' ಆಗಿದ್ದಳು. ಮದುವೆಯಾಗಿ, ಹತ್ತಾರು ಎಕರೆ ತೆಂಗಿನ ತೋಟ, ಭತ್ತದ ಗದ್ದೆ, ಇಪ್ಪತ್ತಾಲ್ಕು ಕಂಬದ ಹಟ್ಟಿಯೇನು, ಅರಮನೆಯನ್ನೇ ಹೊಕ್ಕ ಭಾಗಕ್ಕ ಅಲ್ಲಿ ಕೂಡ ಎದುರು ಮಾತಾಡದ, ಅದ ಮಾಡುತ್ತೇನೆ ಇದ ಬಿಡುತ್ತೇನೆ ಎನ್ನದ, ಇಕ್ಕಿದಾಗ ಉಂಡು, ಕೊಟ್ಟಾಗ ಉಟ್ಟು, ಉಸಿರಾಡುವ ತಾನೊಬ್ಬಳು ಇದ್ದೇನೆ ಎಂಬುದು ಯಾರಿಗೂ ಅರಿವಾಗದಂತೆ ಮೂಗಿಗೆ ಕವಡೆ ಕಟ್ಟಿಕೊಂಡು ದುಡಿಯುತ್ತಿದ್ದ ಭಾಗಕ್ಕ ದುಡಿತದ ಕಾರಣದಿಂದ ಎಲ್ಲರಿಗೂ ಬೇಕಾದವಳಾಗಿದ್ದಳು"[2] ಈ ಮೂಲಕ ಮನೆಯೊಳಗೆ ತನ್ನ ಅಸ್ತಿತ್ವವೇ ಇದ್ದು ಇಲ್ಲದಂತೆ ದುಡಿಯುವ, ಉಸಿರಾಡಲು ತಾನೊಬ್ಬಳು ಇದ್ದೇನೆ ಎನ್ನುವುದು ಯಾರಿಗೂ ಅರಿವಿಗೆ ಬಾರದಂತಹ ಹೆಣ್ಣಿನ ಪಾತ್ರವೊಂದನ್ನು ಕಟ್ಟಿಕೊಡುತ್ತಾರೆ. ವೈದೇಹಿಯವರ 'ಮರ ಗಿಡ ಬಳ್ಳಿ' ಕಥೆಯ ಮಂದಕ್ಕ, 'ಶೋಧ' ಕಥೆಯ ಭಾರತಿ ಮನೆಯೊಳಗಿನ ದುಡಿಮೆಯ ಮಹಿಳೆಯರಿಗೆ ಇನ್ನೆರಡು ಉದಾಹರಣೆಗಳು. ಇಂತಹ ಅನೇಕ ಸ್ತ್ರೀಯರು ಕಥೆಗಳಲ್ಲಿ ಸಿಗುತ್ತಾರೆ. ತಾವು ಹೀಗಿದ್ದರೇನೇ ಕುಟುಂಬಕ್ಕೆ ಕ್ಷೇಮ

ಎಂಬ ಚಿಂತನಾಗತಿಯನ್ನು ಹೊಂದಿದ್ದ ಇಂತಹ ಮಹಿಳೆಯರು ಪ್ರಜ್ಞೆಯ ವಸಾಹತೀಕರಣಕ್ಕೆ ಒಳಗಾಗಿರುವುದು ಕಂಡುಬರುತ್ತದೆ.

ಇಂತಹ ಮಹಿಳೆಯರ ಚಿಂತನೆಗಳು ವ್ಯವಸ್ಥೆ ರೂಪಿಸಿದ ಚೌಕಟ್ಟಿನ ಒಳಗಿದ್ದುಕೊಂಡು ಮನೆ ಮತ್ತು ಜಗತ್ತುಗಳ ನಡುವಿನ ಸಂಪರ್ಕವನ್ನೇ ಬೇರ್ಪಡಿಸಿವೆ.

ಆರ್ಥಿಕವಾಗಿ ಪರಾವಲಂಬಿಯಾದ ಮಹಿಳೆಗೆ ಮೊದಲು ತೆರೆದುಕೊಂಡ ಆರ್ಥಿಕ ಕ್ಷೇತ್ರವೆಂದರೆ ವೇಶ್ಯಾವೃತ್ತಿ. ವೇಶ್ಯಾವೃತ್ತಿ ಕೈಗೊಂಡು ಜೀವನ ನಿರ್ವಹಣೆ ಮಾಡುವ ಕೆಲವು ಸ್ತ್ರೀಪಾತ್ರಗಳು ಸಾಹಿತ್ಯ ಕೃತಿಗಳಿಗೆ ವಸ್ತುವನ್ನೊದಗಿಸಿವೆ. ನಿರಂಜನರ 'ಕೊನೆಯ ಗಿರಾಕಿ' ಶಿವರಾಮ ಕಾರಂತರ 'ಮೈಮನಗಳ ಸುಳಿಯಲ್ಲಿ', ಬಿ.ಟಿ. ಜಾಹ್ನವಿ ಅವರ 'ವ್ಯಭಿಚಾರ' ಇಲ್ಲೆಲ್ಲ ಹೆಣ್ಣಿನ ವೇಶ್ಯಾವೃತ್ತಿ ಚರ್ಚೆಗೊಳಗಾಗಿದೆ. ಗೀತಾ ನಾಗಭೂಷಣರ 'ಬದುಕು ನುಂಗುವ ಮಂದಿ' ಕಥೆಯಲ್ಲಿ ಭಿಕ್ಷೆ ಬೇಡುವ ವೃತ್ತಿಯಿಂದ ಬದುಕು ಸಾಗಿಸುವ ಸ್ತ್ರೀ ಪಾತ್ರವನ್ನು ಕಾಣುತ್ತೇವೆ. ಇಲ್ಲಿನ ಸ್ವಾಭಿಮಾನಿಯಾದ ಹೆಣ್ಣು ತನ್ನ ಭಿಕ್ಷೆ ಬೇಡಿ ಜೀವನ ನಡೆಸುವ ರೀತಿಗೆ ಸಮಾಜದ ತಿರಸ್ಕಾರವನ್ನು ಎದುರಿಸಿ ಮತ್ತೆ

ಆ ವೃತ್ತಿಯನ್ನು ಮುಂದುವರಿಸದೆ ಹೂ ಮಾರುವ ಕಾಯಕದಲ್ಲಿ ತೊಡಗಿಕೊಳ್ಳುವುದು ಕಂಡುಬರುತ್ತದೆ. ಈ ಕಾಲಕ್ಕಾಗಲೇ ವೇಶ್ಯಾವಾಟಿಕೆ, ಭಿಕ್ಷಾಟಣೆಗಳು ಸಮಾಜದಲ್ಲಿ ಅಪ್ರಸ್ತುತಗಳಾಗಿ ಸಣ್ಣ ಕೆಲಸಗಳಾದರೂ ಸ್ವಾಭಿಮಾನದಿಂದ ತಮ್ಮ ಅನ್ನವನ್ನು ತಾವೇ ದುಡಿದು ತಿನ್ನುವೆವೆಂಬ ಛಲ ಮಹಿಳೆಯರಲ್ಲಿ ಕಾಣಿಸಿಕೊಂಡಿವೆ. ಹೂ ಮಾರುವ, ಹೊಲಿಗೆ ಕೆಲಸ ಮಾಡುವ, ಸೊಪ್ಪು ತರಕಾರಿಗಳನ್ನು ಮಾರಾಟ ಮಾಡುವ, ಕೆಳ ವರ್ಗದ ಮಹಿಳೆಯರು ಇತರ ಉನ್ನತ ವರ್ಗದವರ ಮನೆಗಳಲ್ಲಿ ಮನೆ ಕೆಲಸಗಳನ್ನು ಮಾಡಿ ಸಂಪಾದನೆ ಮಾಡುವ ಇತ್ಯಾದಿ ಕೆಲಸಗಳಲ್ಲಿ ತೊಡಗಿಕೊಂಡಿರುವ ಸ್ತ್ರೀಯರ ಚಿತ್ರಣ ಕಥೆಗಳಲ್ಲಿ ಬಂದಿವೆ.

ಆಧುನಿಕ ಸಂದರ್ಭದಲ್ಲಿ ಉದ್ಯೋಗಸ್ಥ ಮಹಿಳೆಯರು ಸಾರ್ವಜನಿಕ ಸಮಾಜದಲ್ಲಿ ವಿಸ್ತರಿಸಿಕೊಂಡ ಅನುಭವಗಳನ್ನು ತಮ್ಮ ಕಥನಗಳಲ್ಲಿ ದಾಖಲುಪಡಿಸಿರುವುದರಿಂದ ಉದ್ಯೋಗಸ್ಥೆಯರಾದ ಮಹಿಳೆಯರ ಜೀವನ ಸಂಕೀರ್ಣತೆಗಳು ತೆರೆದುಕೊಳ್ಳತೊಡಗಿವೆ. ಆಧುನಿಕ ಜೀವನದ ಸಂಕೀರ್ಣತೆ, ಮಹಿಳೆಯರು ಎದುರಿಸುವ ಔದ್ಯೋಗಿಕ ಸಮಸ್ಯೆಗಳು, ಎದುರಾಗುವ ಸವಾಲುಗಳನ್ನು ಅವರು ಹೇಗೆ ಮುಖಾಮುಖಿಯಾಗುತ್ತಿದ್ದಾರೆ ಎನ್ನುವುದಕ್ಕೆ ಲೇಖಕಿಯರ ಕೃತಿಗಳು ಸ್ಪಂದಿಸಿವೆ. ಆದ್ದರಿಂದಲೇ ಲೇಖಕಿಯರ ಕಥೆಗಳಲ್ಲಿ ಹೊರಗೆ ಹೋಗಿ ದುಡಿಯುವ ಮಹಿಳೆಯರ ಸಮಸ್ಯೆಗಳು, ಆ ಸಮಸ್ಯೆಗಳಿಗೆ ಅಗತ್ಯವಾದ ಪರಿಹಾರವನ್ನು ಹೇಗೆ ಕಂಡುಕೊಳ್ಳಬಹುದು ಎನ್ನುವ ವಿಶ್ಲೇಷಣೆಯೂ ಒಳಗೊಂಡಿದೆ.

ಡಾ.ಟಿ.ಆರ್. ಚಂದ್ರಶೇಖರ ಅವರು 'ದುಡಿಮೆ'ಯನ್ನು ವಿಶ್ಲೇಷಿಸಿರುವ ರೀತಿಯೆಂದರೆ"ಅರ್ಥಶಾಸ್ತ್ರ ಅಥವಾ ಸಮಾಜಶಾಸ್ತ್ರದಲ್ಲಿ ಮಾರುಕಟ್ಟೆಗಾಗಿ ಸರಕು ಮತ್ತು ಸೇವೆಗಳನ್ನು ಉತ್ಪಾದಿಸುವಂತಹ ಕ್ರಿಯೆಯನ್ನು ದುಡಿಮೆ ಎಂದು ನಿರ್ವಚಿಸಲಾಗಿದೆ. ಮಾರಾಟದ ಉದ್ದೇಶದಿಂದ ಇಲ್ಲಿ ವಸ್ತುಗಳನ್ನೂ ಸರಕುಗಳನ್ನೂ ತಯಾರಿಸಲಾಗುತ್ತದೆ. ಮಾರುಕಟ್ಟೆಯನ್ನು ಹೊರತುಪಡಿಸಿದ ದುಡಿಮೆ ಅರ್ಥಶಾಸ್ತ್ರದಲ್ಲಿಲ್ಲ. ಇಲ್ಲಿ ಮಾರುಕಟ್ಟೆಗೆ ದುಡಿಮೆ ಸಂಬಂಧಿಸಿರುತ್ತದೆ ಮತ್ತು ದುಡಿಮೆಯಿಂದ ಏನಾದರೂ ಭೌತಿಕವಾಗಿ ಉತ್ಪನ್ನ ಬರಬೇಕಾಗುತ್ತದೆ ಮತ್ತು ಸರಕು ಮತ್ತು ಸೇವೆಗಳಿಂದಾದ ಪ್ರಯತ್ನದಿಂದ ಪ್ರತಿಫಲ ಉತ್ಪನ್ನದ ರೂಪದಲ್ಲಿ ಬರದೇ ಇದ್ದರೆ ಅದು ದುಡಿಮೆ ಎಂದೆನಿಸಿಕೊಳ್ಳುವುದಿಲ್ಲ. ಸರಕು ಮತ್ತು ಸೇವೆಗೆ ಸಂಬಂಧಿಸಿದ್ದಾಗಿಯೂ, ದುಡಿಮೆಯನ್ನು ಹಣ ರೂಪದಲ್ಲಿ ಗುರುತಿಸಲಾಗುತ್ತದೆ. ಮಾಪನ ಮಾಡಲಾಗುತ್ತದೆ. ಹಣ ಇಲ್ಲದೇ ದುಡಿಮೆಯನ್ನು ಪರಿಭಾವಿಸಿಕೊಳ್ಳುವುದು ಸಾಧ್ಯವಿಲ್ಲ"[3] ಈ ವ್ಯಾಖ್ಯೆಯ ಒಳಗಡೆ ಸ್ತ್ರೀಯರ ಮನೆ ಒಳಗಿನ ದುಡಿಮೆ ಸೇರಿಕೊಳ್ಳುವುದಿಲ್ಲ. ಯಾಕೆಂದರೆ ಸ್ತ್ರೀಯರ ಮನೆ ಒಳಗಿನ ದುಡಿಮೆಗೆ ಪ್ರತಿಫಲ ಉತ್ಪನ್ನದ ರೂಪದಲ್ಲಿ ಲಭಿಸುವುದಿಲ್ಲ. ಮಾರುಕಟ್ಟೆ ಬೆಲೆ, ಸಂಭಾವನೆ, ಲಾಭ ಮುಂತಾದವು ದುಡಿಮೆಯ ಲಕ್ಷಣಗಳು. ಇಂತಹ ಯಾವುದೇ

ಗುಣವನ್ನು ಅಭಿವ್ಯಕ್ತಪಡಿಸದ ಗೃಹವಾರ್ತೆಯು ದುಡಿಮೆಯಾಗಲು ಸಾಧ್ಯವಿಲ್ಲ ಎನ್ನುವ ಚಿಂತನೆಯಿದೆ. ಆದರೆ ಜಾಗತೀಕರಣದ ಸಮಾಜದಲ್ಲಿ ಹೆಣ್ಣಿನ ದುಡಿಮೆಗೆ ಸಂಬಂಧಪಟ್ಟಂತೆ ಉತ್ಪಾದನೆಯು ಮನೆಯೊಳಗಿನ ಹಾಗೂ ಮನೆ ಹೊರಗಿನ ಚಟುವಟಿಕೆಗಳ ಸಂಯುಕ್ತ ಕ್ರಿಯೆಯಾಗಿ ಪರಿಭಾವಿಸಿರುವ ಕ್ರಮ ಕಾಣಿಸಿಕೊಳ್ಳುತ್ತಿದೆ. ಕುಟುಂಬವೊಂದರ ಪ್ರಗತಿಯು ಇವೆರಡೂ ಬಗೆಯ ಚಟುವಟಿಕೆಗಳ ಅಂದರೆ ಹಣಕಾಸು ನಿರ್ವಹಣೆ, ಕ್ರಯ-ವಿಕ್ರಯ, ಉತ್ಪಾದನೆ, ಗೃಹವಾರ್ತೆ, ಸಂತಾನೋತ್ಪತ್ತಿ ಮುಂತಾದ ಸಂಗತಿಗಳನ್ನು ಅವಲಂಬಿಸಿಕೊಂಡಿದೆ. ಆದ್ದರಿಂದಲೇ ಹೆಣ್ಣಿನ ಮನೆಯೊಳಗಿನ ಉತ್ಪಾದನಾ ಚಟುವಟಿಕೆಗಳಿಗೆ ಬೆಲೆ ಕಲ್ಪಿಸುವ ಕಾಲ ಬಂದೊದಗಿದೆ. ಮನೆಯೊಳಗಿನ ಚಟುವಟಿಕೆಗಳನ್ನು 'ಸಾಂಸ್ಕೃತಿಕ'ವೆಂದೂ ಹೆಣ್ಣಿಗೆ ಮಾತ್ರ ಸಂಬಂಧಪಟ್ಟುದೆಂದೂ ನೋಡುವುದಕ್ಕೆ ಪ್ರತಿಯಾಗಿ ಉತ್ಪಾದನಾ ಕ್ರಿಯೆಯಾಗಿ ಸ್ತ್ರೀ ಪುರುಷರ ಸಮಾನ ನೆಲೆಯಲ್ಲಿ ಪರಿಭಾವಿಸಲಾಗುತ್ತಿದೆ. ಉತ್ಪಾದನೆಗೆ ಗೃಹವಾರ್ತೆಯ ಕೊಡುಗೆಯೂ ಮಹತ್ವವಾದುದು. ಇವುಗಳನ್ನು ಒಳಗೊಂಡಂತೆ 'ಉತ್ಪಾದನೆ'ಯನ್ನು ನಿರ್ವಚಿಸಿಕೊಳ್ಳುವ ಅಗತ್ಯವಿದೆ. ನೇಮಿಚಂದ್ರರ 'ನೀವು ಕಾಣದ ನಾಳೆಗಳಲ್ಲಿ' ಕಥೆಯಲ್ಲಿ ಕಥಾನಾಯಕ ನಾಯಕಿಯರು ಇಬ್ಬರೂ ದುಡಿಯುವವರಾಗಿದ್ದು, ಮನೆಯೊಳಗಿನ ಚಟುವಟಿಕೆಗಳನ್ನು ಹೆಣ್ಣಿಗೆ ಮಾತ್ರ ಸಂಬಂಧಪಟ್ಟದೆಂದು ನೋಡುವ ಬದಲು ಉತ್ಪಾದನಾ ಕ್ರಿಯೆಯಾಗಿ ಇಬ್ಬರೂ ಸಮಾನ ನೆಲೆಯಲ್ಲಿ ನೆರವೇರಿಸುವ ಸನ್ನಿವೇಶವಿದೆ. ಆದರೆ ಈ ರೀತಿಯ ಸಮಾನ ನೆಲೆಯ ದುಡಿಮೆಗೆ ಸಮಾಜದ ಒಪ್ಪಿಗೆ ಲಭಿಸಿಲ್ಲ ಎನ್ನುವ ಕಾರಣಕ್ಕೆ ಇಲ್ಲಿನ ಪುರುಷನು ಮಾಡುವ ಮನೆಯೊಳಗಿನ ಕೆಲಸಗಳಿಗೆ ವಿರೋಧ ವ್ಯಕ್ತವಾಗಿದೆ. ಉದ್ಯೋಗಸ್ಥೆ ಪತ್ನಿಗೆ ಮನೆ ಕೆಲಸಗಳಲ್ಲಿ ಸಹಾಯ ಮಾಡುವ ಪತಿ 'ಅಮ್ಮಾವ್ರ ಗಂಡ' ಎಂಬ ವ್ಯಂಗ್ಯಕ್ಕೆ ಒಳಗಾದರೆ, ಮನೆ ಕೆಲಸಗಳಲ್ಲಿ ಪತಿಯ ಸಹಾಯವನ್ನು ಬಯಸುವ ಉದ್ಯೋಗಸ್ಥೆ ಪತ್ನಿಯ ಬಗೆಗೆ ಆತನ ತಾಯಿಯ ನಿಲುವು "ಅದಕ್ಕೇ ಹೇಳೋದು ಈ ದುಡಿಯೋ ಹುಡುಗೀರು ಬೇಡ ಅಂತಾ. ಅಚ್ಚುಕಟ್ಟಾಗಿ ನಿನ್ನ ಹೊಟ್ಟೆ ನೆತ್ತಿ ನೋಡೋ ಅಂತ ಹುಡುಗಿ ತರ್ತಾ ಇದ್ದೆ. ದುಡಿದು ಏನು ಉದ್ಧಾರ ಮಾಡ್ತಾಳೆ, ಗಂಡನ ಕೈಲೇ ಎಲ್ಲ ಮಾಡಿಸೋಳು"[4] ಎನ್ನುತ್ತಾರೆ. ಸಂಪ್ರದಾಯ ಹಾಗೂ ಆಧುನಿಕ ಜೀವನ ಸ್ಥಿತಿಗಳು ಮುಖಾಮುಖಿಯಾಗಿ ಕಥಾನಾಯಕನಲ್ಲಿ ಅತಂತ್ರ ಸ್ಥಿತಿ ಏರ್ಪಡುವ ಇಂತಹ ಸನ್ನಿವೇಶಗಳಲ್ಲಿ ಹೆಣ್ಣಿನ ಬಗೆಗಿನ ಸಮಾಜದ ಭಾವನೆಗಳು ಬದಲಾಗಬೇಕಾದ ತುರ್ತನ್ನು ಕಥೆಯ ಮೂಲಕ ಲೇಖಕಿ ವ್ಯಕ್ತಪಡಿಸುತ್ತಾರೆ.

ವೀಣಾ ಶಾಂತೇಶ್ವರವರ ಕಥೆಗಳ ಸ್ತ್ರೀ ಪಾತ್ರಗಳು ಬುದ್ಧಿ, ಮನಸ್ಸುಗಳಿಂದ ಕ್ರಿಯಾಶೀಲರಾಗಿ ಕಾಣಿಸಿಕೊಳ್ಳುತ್ತಾರೆ. ವಿದ್ಯಾವಂತರಾದ, ಉದ್ಯೋಗಸ್ಥೆಯರಾದ ಸದೃಢ ಸ್ತ್ರೀಯರನ್ನು ಇವರ ಕಥೆಗಳು ಪರಿಚಯಿಸಿಕೊಡುತ್ತವೆ. ಕಥೆಗಳ ನಾಯಕಿಯರು ವಿವಾಹ, ತಾಯ್ತನ, ಉದ್ಯೋಗ ಇವೆಲ್ಲವುಗಳ ಬಗೆಗೆ ಆಯ್ಕೆಯ ಪ್ರಶ್ನೆ ಬಂದಾಗ ದ್ವಂದ್ವ ವ್ಯಕ್ತಿತ್ವ ತಾಳದೆ ಸರಿಯಾದ ನಿರ್ಧಾರಗಳನ್ನು ಕೈಗೊಂಡು ಆಯ್ಕೆಯ

ಪ್ರಶ್ನೆಯನ್ನು ಸಮರ್ಥವಾಗಿಯೇ ನಿಭಾಯಿಸುತ್ತಾರೆ. ಇವರಿಗೆ ಎದುರಾಗುವ ಬದುಕಿನ ಕಠಿಣ ತಿರುವುಗಳಲ್ಲಿ ತಮ್ಮ ಕೇಂದ್ರಸ್ಥಾನದಲ್ಲಿ ತಾವು ಕಾಣಿಸಿಕೊಂಡು ಅಸ್ತಿತ್ವವಾದದ ಛಾಪನ್ನು ಮೂಡಿಸಿಬಿಡುತ್ತಾರೆ. ಇವರು ಮಾಡಿಕೊಳ್ಳುವ ಆಯ್ಕೆಯ ಹಿಂದೆ ಶಿಕ್ಷಣ, ಉದ್ಯೋಗ, ಆರ್ಥಿಕ ಸ್ವಾತಂತ್ರ್ಯಗಳು ಕೆಲಸ ಮಾಡಿವೆ.

ವೈದೇಹಿಯವರ ಕಥೆಗಳಲ್ಲಿ ಉದ್ಯೋಗಸ್ಥ ಮಹಿಳೆಯರ ಚಿತ್ರಣ ಕಡಿಮೆ. ಅದಕ್ಕೆ ಅವರು ನೀಡುವ ಕಾರಣ "ಒಂದು ಹೆಣ್ಣು ಅಥವಾ ಗಂಡು ಮನೆಯಲ್ಲಿ ಯಾರಾದರೂ ಒಬ್ಬರು ದುಡಿಯಲಿಕ್ಕೆ ಹೋದರೆ ಸಾಕು ಎನ್ನುವುದು ನನ್ನ ಅಭಿಪ್ರಾಯ. ಒಬ್ಬರ ಸಂಪಾದನೆಯೇ ಮನೆಯ ನಿರ್ವಹಣೆಗೆ ಸಾಲತ್ತೆ ಅನ್ನೋದಾದರೆ ಇಬ್ಬರೂ ದುಡಿಯಲಿಕ್ಕೆ ಹೋಗಬೇಕಾಗಿಲ್ಲ ಅಂತ ನನ್ನ ಭಾವನೆ. ದುಡಿದರೆ ಮಾತ್ರ ಗೌರವ ಎನ್ನುವುದು ನಗರ ಸಂಸ್ಕೃತಿ. ಉದ್ಯೋಗ ಮತ್ತು ಹೆಣ್ಣು ಅನ್ನುವ ವಿಷಯದಲ್ಲಿ ಆರೋಗ್ಯಕರವಾದ ಭಾವನೆಯನ್ನು ಇಟ್ಟುಕೊಳ್ಳದಿದ್ದರೆ, ತುಂಬ ಕಷ್ಟ ಆಗುತ್ತದೆ. ಉದ್ಯೋಗಂ ಪುರುಷ ಲಕ್ಷಣ ಎಂದು ಹೇಳುತ್ತಾ ಉದ್ಯೋಗವನ್ನು ಪುರುಷನಿಗೇ ಕಟ್ಟಿಹಾಕುವುದು ಸರಿಯಲ್ಲ. ಹಣಕ್ಕೆ ಹೆಚ್ಚು ಬೆಲೆ ಕೊಡದೆ, ಹದವಾದ ಆರ್ಥಿಕ ಮಹತ್ವ ಇದ್ದರೆ, ಆಗ ಎಲ್ಲ ಸರಿ ಆಗುತ್ತದೆ"[5] ಎನ್ನುವ ವೈದೇಹಿಯವರು ಸಾರ್ವಜನಿಕ ಉದ್ಯೋಗದಲ್ಲಿ ತೊಡಗಿಸಿಕೊಂಡಿರುವ ಮಹಿಳೆಯರು ಎದುರಿಸುವ ಲೈಂಗಿಕ ಕಿರುಕುಳ, ಮನೆ ಕೆಲಸ ಹಾಗೂ ಉದ್ಯೋಗದ ಇಮ್ಮಡಿ ಭಾರ, ಇಂತಹ ಸಮಸ್ಯೆಗಳಿಗೆ ತಮ್ಮದೇ ಆದ ರೀತಿಯ ಪರಿಹಾರವನ್ನು ನೀಡಿದ್ದಾರೆ.

ಸ್ತ್ರೀ ಪುರುಷ ದುಡಿಮೆಗಳು ಜೈವಿಕ ಲಿಂಗವ್ಯತ್ಯಾಸದ ಕಾರಣಕ್ಕೆ ಸಮಾಜ ಜೀವನದಲ್ಲಿ ವಿಭಜಿತವಾಗಿ ಹೋಗಿರುವ ಕ್ರಮವನ್ನು ವಿಶ್ಲೇಷಿಸುವ ವೈದೇಹಿಯವರ 'ಮರೆವು' ಕಥೆಯು ಇಬ್ಬರ ಸಹಭಾಗಿತ್ವದಲ್ಲಿ ಸಮಾನ ನೆಲೆಯಲ್ಲಿ ಮೂಡಿಬಂದಾಗ ಮಾತ್ರ ಹೆಣ್ಣಿಗೆ ಮನೆ ಕೆಲಸಗಳಿಂದ ಬಿಡುಗಡೆ ಸಾಧ್ಯವಾಗಬಹುದೆಂಬ ವಾಸ್ತವ ನೆಲೆಯ ಪ್ರಜ್ಞೆಯನ್ನು ವ್ಯಕ್ತಪಡಿಸಿದೆ. ಸ್ತ್ರೀ ಪುರುಷ ಸಂಬಂಧಗಳು ಅಸಮಾನ ನೆಲೆಯಲ್ಲಿರುವುದಕ್ಕೆ ಅವರಿಬ್ಬರೂ ಪಾರಂಪರಿಕವಾಗಿ ಮಾಡಿಕೊಂಡು ಬಂದಿರುವ ಕೆಲಸಗಳೇ ಕಾರಣಗಳೆಂದು ಲೇಖಕಿ ಕಥೆಯಲ್ಲಿ ಸೂಚಿಸುತ್ತಾರೆ. ಎಂದರೆ ಅವನ್ನು ಬದಲು ಮಾಡಿಕೊಂಡಾಗ ಎಲ್ಲ ಕೆಲಸಗಳೂ ಸಮಾನ ಪ್ರಾಮುಖ್ಯ ಪಡೆದು ಸಂಬಂಧಗಳೂ ಸಮಾನವಾಗಬಹುದೆಂದು ವೈದೇಹಿ ಅವರ ನಿಲುವು. ಮನೆಯ ಒಳಗಿನ ಕೆಲಸಗಳು ಹೆಣ್ಣಿನವು, ಹೊರಗಿನ ಮೌಲ್ಯಯುತ ದುಡಿಮೆ ಗಂಡಿನದ್ದು ಎಂಬ ಮೀಸಲಾತಿ ತತ್ವಗಳನ್ನು ವೈದೇಹಿಯವರು ವಿರೋಧಿಸುತ್ತಾರೆ. ಕುಟುಂಬದ ಸದಸ್ಯರೆಲ್ಲರೂ ಎಲ್ಲ ಕೆಲಸಗಳನ್ನೂ ಸಮಾನ ಶ್ರದ್ಧೆ ಗೌರವಗಳಿಂದ ಮಾಡುವುದು ಸಾಧ್ಯವಾದಾಗ ಲಿಂಗ ಅಸಮಾನತೆ ಕ್ರಮೇಣ ಕಡಿಮೆಯಾಗಬಹುದು ಎನ್ನುವುದು ಲೇಖಕಿಯ ಆಶಯ.

'ಮರೆವು' ಕಥೆಯಲ್ಲಿ ಸೀರೆ ಉಟ್ಟುಕೊಂಡು ಅಡಿಗೆ ಮನೆಯಲ್ಲಿ ಮೊಮ್ಮಕ್ಕಳಿಗೆ ಊಟ ತಿಂಡಿ ಮಾಡಿಸುವ ಅಜ್ಜ 'ಅಜ್ಜಿ'ಯಾಗಿ ಪರಿವರ್ತನೆ ಹೊಂದಿದರೆ, ಪಂಚೆಯುಟ್ಟು ಪೇಟೆಗೆ ಹೋಗಿಬರುವ ಅಜ್ಜಿ 'ಅಜ್ಜ'ನಾಗಿ ರೂಪಾಂತರಗೊಳ್ಳುವ ಕಥೆಯಲ್ಲಿ ಲೇಖಕಿಯ ಜೀವನದರ್ಶನವೇ ಕಾಣಿಸಿಕೊಂಡಿದೆ. ಒಟ್ಟಿಗೆ ಬದುಕಿ ಕಡೆಗೆ ಹೆಣ್ಣು ಗಂಡು ಎಂಬ ಮಾಯೆಯೇ ಪರಸ್ಪರರಲ್ಲಿ ಮಾಯವಾಗಿ ಕೇವಲ ಜೀವಿಗಳಾಗಿ ಬಿಡುವ ದಾರ್ಶನಿಕತೆ ಕಥೆಯಲ್ಲಿದೆ. "ಏನೆಂದರೂ ಈ ಹೆಣ್ಣು ಗಂಡು ಮಾಯೆಯೆಲ್ಲ ನಡುವೆ ಇಣುಕಿ ಆಡಿಸಿ ವೃದ್ಧಾಪ್ಯದಲ್ಲಿ ಒಂದು ದರ್ಶನದ ಚೌಕಟ್ಟಿನಲ್ಲಿ ಕೂಡಿಸಲು ಮಾತ್ರ ಇರಬಹುದೇ? ತುದಿಯಲ್ಲಿಲ್ಲ. ಕೊನೆಯಲ್ಲಿಲ್ಲ ನಡುವಲ್ಲೊಂದು ಬಣ್ಣದ ಪ್ರಪಂಚ. ಮೋಹಕ ಮೋಹ ಪ್ರಪಂಚ. ಮಗು ಮುಗ್ಧತೆಯಿಂದ ಒಳಬಂದು, ಕಣ್ಣು ತೆರೆದು ಆಘಾತಗೊಂಡು, ಅನುಭವಿಸಿ ಕೊನೆಗೆ ಮತ್ತೆ ಮಗುವಿನಂತಾಗಿಯೂ ಮಗುವಾಗದೆ, ನಿರ್ಗಮಿಸಲು?"[6] ಎನ್ನುವ ನಿಲುವಿನಲ್ಲಿ ಲಿಂಗ ಅಸಮಾನತೆಯನ್ನು ವ್ಯಕ್ತಪಡಿಸುವ ಸಮಾಜಕ್ಕೆ ವೈದೇಹಿಯವರು ಸರಿಯಾದ ಉತ್ತರವನ್ನೇ ನೀಡಿದ್ದಾರೆ.

ನೇಮಿಚಂದ್ರರ 'ಏನೊಂದೂ ಆಗದವರು' ಕಥೆಯ ನಾಯಕಿ ಹೇಳುವ ಮಾತು "ಏನೊಂದೂ ಆಗದೆ ಗಂಡಂದಿರ ಹೆಂಡತಿ ಮಾತ್ರ ಆಗಿ, ತಮ್ಮ ಸತಿತ್ವವನ್ನು ಪ್ರಶಸ್ತಿಯಂತೆ ಧರಿಸಿ ಬೀಗುವ ಹೆಂಗಸರನ್ನು ಕಂಡರೂ ನನಗೆ ಆಗದು"[7] ಈ ಮೇಲಿನ ಮಾತಿನಲ್ಲಿ ಸ್ತ್ರೀ ಕೇವಲ ಹೆಂಡತಿ ಮಾತ್ರ ಆಗಿರದೆ ಅವಳ ವ್ಯಕ್ತಿತ್ವ ಅದರಾಚೆಗೂ ಬೆಳೆಯಬೇಕೆನ್ನುವುದರ ಸೂಚನೆಯಿದೆ. ಹೆಣ್ಣಿನಲ್ಲಿ ಮೂಡಬೇಕಾದ ಮಹತ್ವಾಕಾಂಕ್ಷೆ, ಏನಾದರೂ ಆಗಬೇಕೆಂಬ ಛಲ ಇದುವೇ ಆಕೆಯನ್ನು ಆರ್ಥಿಕ ಸ್ವಾವಲಂಬನೆಯ ಕಡೆಗೆ ತಲಪುವಂತೆ ಮಾಡುವ ಅಂಶಗಳೆಂದು ಲೇಖಕಿ ಸೂಚಿಸುತ್ತಾರೆ. ಆದ್ದರಿಂದಲೇ ಕಥೆಯಲ್ಲಿ ಬೆಳವಣಿಗೆಯ ಉದ್ದೇಶವೇ ಇಲ್ಲದೆ, ಇರುವ ಉದ್ಯೋಗದಲ್ಲೇ ತೃಪ್ತಿಪಟ್ಟುಕೊಳ್ಳುವ ಪುರುಷನನ್ನು ಕಥಾನಾಯಕಿ ತಿರಸ್ಕರಿಸುವ ಮೂಲಕ ತಾನು ಔದ್ಯೋಗಿಕ ಕ್ಷೇತ್ರದಲ್ಲಿ ಬೆಳೆಯುತ್ತಾ ಹೋಗುತ್ತಾಳೆ.

ಪ್ರಸ್ತುತ ಸಮಾಜದಲ್ಲಿ ಆಧುನೀಕರಣದ ಫಲವಾಗಿ ಜಾಗತೀಕರಣದ ಹುಟ್ಟು ಸಂಭವಿಸಿದೆ. ಜಾಗತೀಕರಣ–ಆಧುನೀಕರಣ–ನಗರೀಕರಣದ ಒತ್ತಡಗಳು ಇಂದಿನ ಮಹಿಳೆಗೆ ಹೊರ ದುಡಿಮೆಯನ್ನು ಅನಿವಾರ್ಯವಾಗಿಸಿವೆ. ಶಿಕ್ಷಣ ಪಡೆದಿರಲಿ, ಇಲ್ಲದಿರಲಿ ಸಮಾಜದ ಮೇಲ್ವರ್ಗ, ಮಧ್ಯಮ ವರ್ಗ, ಕೆಳವರ್ಗವೆನ್ನದೆ ಹೆಚ್ಚಿನ ಮಹಿಳೆಯರು ಪ್ರಸ್ತುತ ಸಂದರ್ಭದಲ್ಲಿ ದುಡಿಮೆಯನ್ನು ಕೈಗೊಳ್ಳಬೇಕಾದ ಅನಿವಾರ್ಯತೆ ಬಂದೊದಗಿದೆ. 1980ರ ಶ್ರಮಶಕ್ತಿ ವರದಿಯ ಪ್ರಕಾರ ಗ್ರಾಮೀಣ ಭಾರತದಲ್ಲಿ ಶೇ.35ರಷ್ಟು ಮನೆಗಳ ಉಸ್ತುವಾರಿ ಮಹಿಳೆಯರದ್ದೇ ಆಗಿದೆ. ಗಂಡಸಿನ ಅಭಾವದಲ್ಲಿ ಇಡೀ ಕುಟುಂಬದ ಜವಾಬ್ದಾರಿಯನ್ನು ಹೆಣ್ಣು ಮಕ್ಕಳೇ ನಿಭಾಯಿಸಬೇಕಾಗುತ್ತದೆ. ಗಂಡಸಿನ ಮರಣದಲ್ಲಿ ಜೀವನ ಅತಂತ್ರವಾದಾಗ ಮತ್ತು

ಗಂಡಸಿನ ಬೇಜವಾಬ್ದಾರಿತನ ಈ ಎರಡು ಸ್ಥಿತಿಯಲ್ಲೂ ಮನೆಯ ನಿರ್ವಹಣೆಗೆ ಸ್ವಾಭಿಮಾನಿ ಮಹಿಳೆಗೆ ದುಡಿಮೆ ಅನಿವಾರ್ಯವಾಗುತ್ತದೆ.

ಸ್ತ್ರೀಯರ ದುಡಿಮೆಯನ್ನು ಲಿಂಗ ವ್ಯತ್ಯಾಸದ ನೆಲೆಯ ಮೂಲಕ ನೋಡುವುದರಿಂದ ಸ್ವತಂತ್ರಗೊಳಿಸಿದರೆ ಮಾತ್ರವೇ ಅವಳ ವಿಮೋಚನೆ ಸಾರ್ಥಕವಾಗಬಹುದು. ಕೆಳ, ಮಧ್ಯಮ ಹೀಗೆ ಯಾವುದೇ ವರ್ಗವನ್ನು ಹೊಂದಿರಲಿ ಪುರುಷನ ಜೊತೆಗಾತಿ ಒಬ್ಬಳು ಸ್ತ್ರೀಯಾದ ಕಾರಣಕ್ಕೆ ಅವಳು ನಿರ್ವಹಿಸಲೇ ಬೇಕಾದ ದುಡಿಮೆಯ ಭಾರ ಆಕೆಗಿದೆ. ಪ್ರೀತಿ, ಸ್ನೇಹ, ಅನುಕಂಪ, ತ್ಯಾಗ ಮೊದಲಾದ ಪದಗಳನ್ನು ಬಳಸಿಕೊಂಡು, ಆಕೆಯನ್ನು ವೈಭವೀಕರಿಸಿಕೊಂಡು ಆಕೆಯ ದುಡಿಮೆಯನ್ನು ಮೌಲ್ಯರಹಿತ ಮಾಡಿ ವ್ಯವಸ್ಥೆ ಬಳಸಿಕೊಳ್ಳುತ್ತಿದೆ. ಆರ್ಥಿಕ ಸ್ವಾತಂತ್ರ್ಯವಾಗಲಿ, ವರ್ಣ-ವರ್ಗ ಸಮಾನತೆಯಾಗಲಿ ಸ್ತ್ರೀಗೆ ವಿಮೋಚನೆಯನ್ನು ನೀಡುವುದಿಲ್ಲ. ಸ್ತ್ರೀ ವಿಶಿಷ್ಟ ಅನನ್ಯತೆಯನ್ನು ಗಮನಕ್ಕೆ ತೆಗೆದುಕೊಳ್ಳದೆ ನಡೆಸುವ ಯಾವ ಪ್ರಯತ್ನವೂ ಸ್ತ್ರೀಯ ವಿಮೋಚನೆಯ ಕಾರ್ಯದಲ್ಲಿ ಭಾಗಿಕವಾದ ವಿಜಯವನ್ನು ಮಾತ್ರ ತಂದುಕೊಡಬಹುದು ಎನ್ನುವುದನ್ನು ಮೇಲಿನ ಕಥೆಗಳು ಸೂಚಿಸುತ್ತವೆ.

**ಕೊನೆ ಟಿಪ್ಪಣಿ:**

1. ಶ್ರೀಮತಿ ಎಚ್.ಎಸ್. (ಅನುವಾದ), (2007), ದ ಸೆಕೆಂಡ್ ಸೆಕ್ಸ್, ಅಧ್ಯಯನ ಮಂಡಲ, ಬೆಂಗಳೂರು, ಪು.ಸಂ. 741.
2. ಹೊಸತು ವಾಚಿಕೆ, ಕಥಾಕುಂಜ (ಸಣ್ಣ ಕತೆಗಳು), ಪು.ಸಂ. 155
3. ಶ್ರೀಮತಿ ಎಚ್.ಎಸ್., ಶಿವಾನಂದ ಎಸ್. ವಿರಕ್ತಮಠ, ಕೃಷ್ಣ ಜೆ. (ಸಂ), (2007), ಮಹಿಳಾ ಆರ್ಥಿಕತೆ, ಮಹಿಳಾ ಅಧ್ಯಯನ ಕೇಂದ್ರ, ಕನ್ನಡ ವಿ.ವಿ., ಹಂಪಿ, ಪು.ಸಂ. 21
4. ನೇಮಿಚಂದ್ರ, (2001), ಇಲ್ಲಿಯವರೆಗಿನ ನೇಮಿಚಂದ್ರರ ಕಥೆಗಳು, ಅಂಕಿತ ಪುಸ್ತಕ, ಬೆಂಗಳೂರು, ಪು.ಸಂ. 258
5. ಮುರಳೀಧರ ಉಪಾಧ್ಯ ಹಿರಿಯಡಕ, (2018), ವೈದೇಹಿ ಜೀವನ ಮತ್ತು ಕೃತಿಗಳ ಸಮೂಹ ಶೋಧ, ಅಭಿನವ ಪ್ರಕಾಶನ, ಬೆಂಗಳೂರು, ಪು.ಸಂ. 41
6. ವೈದೇಹಿ, (2006), ಅಲೆಗಳಲ್ಲಿ ಅಂತರಂಗ, ಅಕ್ಷರ ಪ್ರಕಾಶನ, ಸಾಗರ, ಪು.ಸಂ. 569
7. ನೇಮಿಚಂದ್ರ, (2001), ಇಲ್ಲಿಯವರೆಗಿನ ನೇಮಿಚಂದ್ರರ ಕಥೆಗಳು, ಅಂಕಿತ ಪುಸ್ತಕ, ಬೆಂಗಳೂರು, ಪು.ಸಂ. 295

**ಪರಾಮರ್ಶನ ಗ್ರಂಥಗಳು:**


1. ನೇಮಿಚಂದ್ರ, (2001), ಇಲ್ಲಿಯವರೆಗಿನ ನೇಮಿಚಂದ್ರರ ಕಥೆಗಳು, ಅಂಕಿತ ಪುಸ್ತಕ, ಬೆಂಗಳೂರು.
2. ವೈದೇಹಿ, (2006), ಅಲೆಗಳಲ್ಲಿ ಅಂತರಂಗ, ಅಕ್ಷರ ಪ್ರಕಾಶನ, ಸಾಗರ.
3. ಮುರಳೀಧರ ಉಪಾಧ್ಯ ಹಿರಿಯಡಕ, (2018), ವೈದೇಹಿ ಜೀವನ ಮತ್ತು ಕೃತಿಗಳ ಸಮೂಹ ಶೋಧ, ಅಭಿನವ ಪ್ರಕಾಶನ, ಬೆಂಗಳೂರು.
4. ಶ್ರೀಮತಿ ಎಚ್.ಎಸ್., ಶಿವಾನಂದ ಎಸ್. ವಿರಕ್ತಮಠ, ಕೃಷ್ಣ ಜೆ. (ಸಂ), (2007), ಮಹಿಳಾ ಆರ್ಥಿಕತೆ, ಮಹಿಳಾ ಅಧ್ಯಯನ ಕೇಂದ್ರ, ಕನ್ನಡ ವಿ.ವಿ., ಹಂಪಿ.
5. ಶ್ರೀಮತಿ ಎಚ್.ಎಸ್. (ಅನುವಾದ), (2007), ದ ಸೆಕೆಂಡ್ ಸೆಕ್ಸ್, ಅಧ್ಯಯನ ಮಂಡಲ, ಬೆಂಗಳೂರು.



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.